# ಕರ್ನಾಟಕ ವಿಧಾನ ಪರಿಷತ್ತು
## (153ನೇ ಅಧಿವೇಶನ)

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 59 (74) |
| ಸದಸ್ಯರ ಹೆಸರು | : | ಶ್ರೀ ಮಂಜನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 15.07.2024 |
| ಉತ್ತರಿಸುವವರು | : | ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ನಾಗರೀಕರ ಪ್ರದೇಶಗಳಲ್ಲಿರುವ ಮರಗಳ ನಿರ್ವಹಣೆ ಜವಾಬ್ದಾರಿ ಯಾರದು; ಸ್ಥಳೀಯ ಸಂಸ್ಥೆಗಳೇ ಅಥವಾ ಲೋಕೋಪಯೋಗಿ ಇಲಾಖೆಯೇ; ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ರಸ್ತೆ ಬದಿ ಪ್ರದೇಶಗಳಲ್ಲಿ ಅಪಾಯಕಾರಿ ಮಟ್ಟದಲ್ಲಿರುವ ಮರಗಳನ್ನು ತೆರವು ಮಾಡದಿರುವುದರಿಂದ ಅವುಗಳು ವಿವಿಧ ಕಾರಣಗಳಿಗಾಗಿ ಮಳೆ ಗಾಳಿ ಬಂದಾಗ ಸಾರ್ವಜನಿಕ ವಾಹನ ಜನರು ಹಾಗೂ ಕಟ್ಟಡಗಳ ಮೇಲೆ ಬಿದ್ದು ವ್ಯಾಪಕ ಹಾನಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಕುರಿತು ಸರ್ಕಾರ ವಹಿಸಿದ ಕ್ರಮಗಳೇನು; (ಮಾಹಿತಿ ನೀಡುವುದು) | ಅರಣ್ಯ ಇಲಾಖೆಯಿಂದ ಸರ್ಕಾರಿ ಸಾರ್ವಜನಿಕ ಪ್ರದೇಶಗಳಲ್ಲಿರುವ ಮರಗಳನ್ನು ನಿರ್ವಹಣೆ ಮಾಡಲಾಗುತ್ತಿದೆ.<br><br>ಸಾರ್ವಜನಿಕ ಪ್ರದೇಶಗಳಲ್ಲಿ ಅಪಾಯಕಾರಿಯಾಗಿರುವ ಮರಗಳನ್ನು ಮಳೆಗಾಲ ಆರಂಭಕ್ಕೂ ಮುಂಚಿತವಾಗಿ ಗುರುತಿಸಲಾಗುತ್ತಿದೆ. ರಸ್ತೆ ಬದಿಯಲ್ಲಿ ಅಪಾಯಕಾರಿ ಮಟ್ಟದಲ್ಲಿರುವ ಮರಗಳನ್ನು ಮಳೆಗಾಲ ಆರಂಭಕ್ಕೂ ಮುಂಚಿತವಾಗಿ ಗುರುತಿಸಿ, ತೆರವು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. |
| (ಆ) | ನಾಗರೀಕ ಪ್ರದೇಶಗಳಲ್ಲಿ ಅಪಾಯಕಾರಿ ಮಟ್ಟದಲ್ಲಿರುವ ಹಾಗೂ ಅಪಾಯಕಾರಿಯಾಗಿರುವ ಮರಗಳನ್ನು ಗುರುತಿಸಲು ಹಾಗೂ ತೆರವುಗೊಳಿಸಲು ರಾಜ್ಯ ಅರಣ್ಯ ಇಲಾಖೆ ಯಾವ ರೀತಿ ನಿಯಮಗಳನ್ನು ಹಾಗೂ ಕ್ರಮಗಳನ್ನು ರೂಪಿಸಿದೆ; (ವಿವರ ನೀಡುವುದು) | |
| (ಇ) | ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಪ್ರತಿವರ್ಷ ಮಳೆಗಾಲದ ಸಂದರ್ಭದಲ್ಲಿ ಹಲವಾರು ಮರಗಳು ಕುಸಿದು ಉರುಳಿ ಬಿದ್ದು ಸಾರ್ವಜನಿಕರ ವಾಹನ, ಆಸ್ತಿ ಪಾಸ್ತಿ ನಷ್ಟ, ಪ್ರಾಣ ಹಾನಿ ಆಗಿದ್ದಾಗ ಅರಣ್ಯ ಇಲಾಖೆ ಯಾವ ಕ್ರಮ ಕೈಗೊಂಡಿದೆ: (ವಿವರ ನೀಡುವುದು) | ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ಅರಣ್ಯ ವಿಭಾಗದ ವ್ಯಾಪ್ತಿಯಲ್ಲಿ ಮಳೆಗಾಲದಲ್ಲಿ ಕುಸಿದು ಉರುಳಿ ಬಿದ್ದ ಮರಗಳನ್ನು ಇಲಾಖಾ ವತಿಯಿಂದ ಕಡಿದು, ಪರಿವರ್ತಿಸಿ ದೊರಕಿದ ಸ್ವತ್ತುಗಳನ್ನು ಹತ್ತಿರದ ಸರ್ಕಾರಿ ನಾಟಾ ಸಂಗ್ರಹಾಲಯಕ್ಕೆ ಸಗಿಸಲಾಗುತ್ತದೆ. ಸಾರ್ವಜನಿಕ ವಾಹನ ಆಸ್ತಿ ಪಾಸ್ತಿ, ಪ್ರಾಣ ಹಾನಿಗಳಿಗೆ ವಿಪತ್ತು ಯೋಜನೆಯಡಿ ಕಂದಾಯ ಇಲಾಖೆಯ ವತಿಯಿಂದ ಕ್ರಮಕೈಗೊಳ್ಳಲಾಗುತ್ತದೆ. |
| (ಈ) | ಸಾರ್ವಜನಿಕ ನಾಗರೀಕ ಪ್ರದೇಶದಲ್ಲಿ ಇರುವ ಮರಗಳನ್ನು ತೆರವು ಮಾಡಲು ಅರಣ್ಯ ಇಲಾಖೆ ಅನುಸುತ್ತಿರುವ ನಿಯಮಗಳು ಸುತ್ತೋಲೆಗಳು ಯಾವುವು: ಅನೇಕ ಕಡೆಗಳಲ್ಲಿ ತೆರವು ಮಾಡಿದ ಮರಗಳ ಅವಶೇಷಗಳನ್ನು ಅಲ್ಲಿಯೇ ಬಿಟ್ಟು ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರ ಗಮನಿಸಿದೆಯೇ; (ವಿವರ ನೀಡುವುದು) | ಕರ್ನಾಟಕ ಅರಣ್ಯ ನಿಯಮಾವಳಿ, 1969 ರ ನಿಯಮ ಅಧ್ಯಾಯ XII ರಲ್ಲಿ ತಿಳಿಸಿದಂತೆ ಹಾಗೂ ಕರ್ನಾಟಕ ಅರಣ್ಯ ಸಂಹಿತೆ, 1976 ರ ಅಪೆಂಡಿಕ್ಸ್ XVIII B ರ ಸರ್ಕಾರಿ ಆದೇಶ ಸಂಖ್ಯೆ:ಅಪಜೀ 168 ಎಫ್‌ಡಿಪಿ 2017, ಬೆಂಗಳೂರು ದಿನಾಂಕ 03.02.2018 ರ ಅನ್ವಯ ಕ್ರಮ ಕೈಗೊಳ್ಳಲಾಗಿದೆ.<br><br>ತೆರವು ಮಾಡಿದ ಮರಗಳನ್ನು ಸ್ಥಳದಲ್ಲಿಯೇ ವಿಲೇ ಮಾಡಲಾಗುತ್ತಿದೆ. |

| | | |
|---|---|---|
| (ಊ) | ರಸ್ತೆ ಬದಿಗಳಲ್ಲಿ ಹಾಗೂ ನಾಗರೀಕ ಪ್ರದೇಶಗಳಲ್ಲಿ ಮರಗಳನ್ನು ವಾರ್ಷಿಕವಾಗಿ ಕತ್ತರಿಸುವ ಹಾಗೂ ವೈಜ್ಞಾನಿಕವಾಗಿ ಕತ್ತರಿಸುವ ಬಗ್ಗೆ ಸರ್ಕಾರ ಚಿಂತನೆ ನಡೆಸಿದೆಯೇ; ಹಾಗೂ ವಿದ್ಯುತ್ ಲೈನ್‌ನ ಬುಡದಲ್ಲಿರುವ ಮರಗಳನ್ನು ವೈಜ್ಞಾನಿಕವಾಗಿ ಒಂದು ಹಂತದ ಎತ್ತರದವರೆಗೆ ಮಾತ್ರ ಬೆಳೆಸಲು ಸರ್ಕಾರ ಏನು ಕ್ರಮ ವಹಿಸಿದೆ? (ವಿವರ ನೀಡುವುದು). | ಸಾರ್ವಜನಿಕ ಪ್ರದೇಶಗಳಲ್ಲಿ ಅಪಾಯಕಾರಿಯಾಗಿರುವ ಮರಗಳನ್ನು ಮಳೆಗಾಲ ಆರಂಭಕ್ಕೂ ಮುಂಚಿತವಾಗಿ ಗುರುತಿಸಲಾಗುತ್ತಿದೆ. ವಿದ್ಯುತ್ ಲೈನ್‌ಗಳ ಅಡಿಯಲ್ಲಿ ಅರಣ್ಯ ಇಲಾಖೆಯಿಂದ ಯಾವುದೇ ಮರಗಳನ್ನು ಬೆಳೆಸಲಾಗುತ್ತಿಲ್ಲ. |

ಸಂಖ್ಯೆ: ಅಪಜೀ 81 ಎಫ್ಎಎಫ್ 2024

(ಈಶ್ವರ ಬಿ. ಖಂಡ್ರೆ)

ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು.